ಕರ್ನಾಟಕ ಸರ್ಕಾರ

ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 03-02-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕರ್ನಾಟಕ ರಾಜ್ಯ ಗೃಹರಕ್ಷಕ ದಳ, ಪೌರರಕ್ಷಣೆ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವೃತ್ತಿಪರ ಹಾಗೂ ಕ್ರೀಡಾಕೂಟ 2014-15.<br><br>ಉದ್ಘಾಟನೆ:<br><br>ಡಾ ಎ,ಜೆ. ಆನಂದನ್, ಪೊಲೀಸ್ ಮಹಾ ನಿರ್ದೇಶಕರು ಹಾಗೂ ಆಯುಕ್ತರು, ಕ್ರೀಡಾ ಮತ್ತು ಯುವಜನ ಸೇವೆಗಳು.<br><br>ವಿಶೇಷ ಆಹ್ವಾನಿತರು:<br><br>ಶ್ರೀ ಎ. ವಿ. ರವಿ, ಮಿಸ್ಟರ್ ಇಂಡಿಯಾ (ಭಾರತ ಶ್ರೇಷ್ಠ) ಅಂತರ ರಾಷ್ಟ್ರೀಯ ದೇಹದಾರ್ಢ್ಯ ಪಟು ಇನ್ಸ್‌ಪೆಕ್ಟರ್ ಆಫ್ ಇನ್‌ಕಂ ಟ್ಯಾಕ್ಸ್.<br><br>ಅಧ್ಯಕ್ಷತೆ:<br><br>ಶ್ರೀ ಓಂ. ಪ್ರಕಾಶ್, ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಗೃಹರಕ್ಷಕ ದಳ, ನಿರ್ದೇಶಕರು, ಪೌರರಕ್ಷಣೆ ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ | 5-02-2015<br>ಗುರುವಾರ<br>ಬೆಳಗ್ಗೆ 9-00 ಗಂಟೆಗೆ | ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029 |

| | | | |
|---|---|---|---|
| | ಮತ್ತು ತುರ್ತು ಸೇವೆಗಳು.<br><br>**ಸಂಪರ್ಕ:**<br><br>ಶ್ರೀ ಶಶಿಧರ್,<br>ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ.<br>ಮೊ.ಸಂ. 9480450668 | | |

**ನಿರ್ದೇಶಕರ ಪರವಾಗಿ**

## ವಿಧಾನ ಮಂಡಲ ಸುದ್ದಿಗಳು:

### ಪತ್ರಿಕಾ ಪ್ರಕಟಣೆ

# ಕಳೆದ ಮೂರು ವರ್ಷ 1101 ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ

**ಬೆಂಗಳೂರು, ಫೆಬ್ರವರಿ 4 (ಕರ್ನಾಟಕ ವಾರ್ತೆ)**

ಕಳೆದ ಮೂರು ವರ್ಷಗಳಲ್ಲಿ ಎಸ್.ಡಿ.ಪಿ. ಯೋಜನೆಯಡಿ ಒಟ್ಟು 1101 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಮಂಜೂರಾತಿ ನೀಡಿದ್ದು, ಅದರಲ್ಲಿ 40 ಕಟ್ಟಡಗಳು ಪೂರ್ಣಗೊಂಡಿವೆ. 334 ಕಟ್ಟಡಗಳು ಪ್ರಗತಿಯಲ್ಲಿವೆ ಹಾಗೂ 727 ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಾರಂಭಿಸಬೇಕಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಉಮಾಶ್ರೀ ಅವರು ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ತಿಳಿಸಿದರು.

ಚಿಕ್ಕಮಗಳೂರು ವಿಧಾನಸಭಾ ಸದಸ್ಯ ಶ್ರೀ ಸಿ.ಟಿ. ರವಿ ಅವರ ಪ್ರಶ್ನೆಗೆ ಅವರ ಪರವಾಗಿ ಶಾಸಕ ಶ್ರೀ ಲಕ್ಷ್ಮಣ್ ಸವದಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಅಂಗನವಾಡಿ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಪಂಚಾಯತ್ ರಾಜ್ ಇಂಜೀನಿಯರಿಂಗ್ ವಿಭಾಗ, ನಿರ್ಮಿತಿ ಕೇಂದ್ರ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಹಾಗೂ ಕರ್ನಾಟಕ ರಾಜ್ಯ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆಗಳಿಗೆ ವಹಿಸಲಾಗಿದೆ.

ಅಂಗನವಾಡಿ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿ ವಿಧಿಸಿರುವುದಿಲ್ಲ ಆದಾಗ್ಯೂ ಅಂಗನವಾಡಿ ಕಟ್ಟಡಗಳನ್ನು ಕನಿಷ್ಠ 1 ವರ್ಷದಿಂದ 2 ವರ್ಷದ ಒಳಗೆ ಪೂರ್ಣಗೊಳಿಸಬೇಕು. ಅಂಗನವಾಡಿ ಕಟ್ಟಡಗಳ ನಿರ್ಮಾಣ ಕಾರ್ಯವು ನಿವೇಶನ ಲಭ್ಯತೆ ಹಾಗೂ ಅನುದಾನ ಲಭ್ಯತೆಯನ್ನು ಅವಲಂಭಿಸಿದೆ ಎಂದು ಸಚಿವೆ ಉಮಾಶ್ರೀ ಅವರು ತಿಳಿಸಿದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 26-12-2014 ರಂದು ಜರುಗಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಹೊಸ ಕಟ್ಟಡಗಳನ್ನು ಒಳಗೊಂಡಂತೆ ಅಪೂರ್ಣಗೊಂಡಿರುವ ಎಲ್ಲಾ ಅಂಗನವಾಡಿ ಕಟ್ಟಡಗಳನ್ನು ನವೆಂಬರ್ – 2016 ರ ಅಂತ್ಯದ

ಒಳಗೆ ಪೂರ್ಣಗೊಳಿಸಲು ತೀರ್ಮಾನಿಸಿದ್ದು, ಅದರಂತೆ ಕ್ರಮ ವಹಿಸಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸೂಚಿಸಿದೆ ಎಂದರು.

ಬಾಬು:ಜಿಪಿಆರ್.

## ಮಿನಿ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲು ಕ್ರಮ

**ಬೆಂಗಳೂರು, ಫೆಬ್ರವರಿ 4 (ಕರ್ನಾಟಕ ವಾರ್ತೆ)**

ಕಲ್ಬುರ್ಗಿ, ಶಿವಮೊಗ್ಗ, ಬಳ್ಳಾರಿ ವಿಜಯಾಪುರ ಹಾಗೂ ಹಾಸನಗಳಲ್ಲಿ ಸಣ್ಣ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು ಉದ್ದೇಶಿಸಿದೆ ಎಂದು ರಾಜ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ತಿಳಿಸಿದರು.

ಅವರು ವಿಧಾನಸಭೆಯಲ್ಲಿ ಇಂದು ಬೀದರ್ ಕ್ಷೇತ್ರದ ಶಾಸಕ ಡಾ. ಗುರುಪಾದಪ್ಪ ನಾಗಮಾರಪಲ್ಲಿ ಅವರ ಪ್ರಶ್ನೆಗೆ ಲಿಖಿತ ರೂಪದ ಉತ್ತರದಲ್ಲಿ ಈ ವಿವರಗಳನ್ನು ನೀಡಿದ್ದಾರೆ.

ರಾಜ್ಯ ಸರ್ಕಾರವು ಮಿನಿ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ 2011–12 ನೇ ಸಾಲಿನಲ್ಲಿ 1.48 ಕೋಟಿ ರೂ. 2012–13 ನೇ ಸಾಲಿನಲ್ಲಿ 3.68 ಕೋಟಿ ರೂ ಹಾಗೂ 2013–14 ನೇ ಸಾಲಿನಲ್ಲಿ 8.10 ಕೋಟಿ ರೂ. ಹಣ ವೆಚ್ಚಮಾಡಿದೆ ಎಂದು ತಿಳಿಸಿದರು.

ಈ ವಿಮಾನ ನಿಲ್ದಾಣಗಳಲ್ಲಿ ಯಾವ ವಿಮಾನ ನಿಲ್ದಾಣವು ಪೂರ್ಣಗೊಂಡಿರುವುದಿಲ್ಲ. ಇದರಲ್ಲಿ ವಿಜಾಪುರ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಅಭಿವೃದ್ದಿದಾರರು ಈ ಯೋಜನೆ ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಕಾರ್ಯ ಸಾಧುವಲ್ಲವೆಂದು ಕಾರಣ ನೀಡಿ ಯೋಜನೆಯಿಂದ ಹಿಂದೆ ಸರಿದಿರುತ್ತಾರೆ. ಕಲ್ಬುರ್ಗಿ ಮತ್ತು ಶಿವಮೊಗ್ಗೆ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಭಿವೃದ್ದಿದಾರರ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿರುತ್ತದೆ. ಸರ್ಕಾರದ ಹಲವು ಮಟ್ಟದ ಪ್ರಯತ್ನದ ಹೊರತಾಗಿಯೂ ಅಭಿವೃದ್ಧಿದಾರರು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ವಿಫಲವಾದ್ದರಿಂದ ಸರ್ಕಾರವು ಅಭಿವೃದ್ಧಿದಾರರು ನೀಡಿದ್ದ ಬ್ಯಾಂಕ್ ಗ್ಯಾರಂಟಿಯನ್ನು ಮುಟ್ಟುಗೋಲು ಹಾಕಿಕೊಂಡು ಅಭಿವೃದ್ಧಿದಾರರೊಂದಿಗೆ ಮಾಡಿಕೊಂಡಿದ್ದ ಯೋಜನಾ ಒಪ್ಪಂದವನ್ನು ರದ್ದುಪಡಿಸಲಾಗಿರುತ್ತದೆ. ಹಾಸನ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿದಾರರು ವಿಸ್ತೃತ ಯೋಜನಾ ವರದಿ ನೀಡಿದ್ದು, ಈ ವರದಿಯು ಪರಿಶೀಲನೆಯಲ್ಲಿರುತ್ತದೆ. ಬಳ್ಳಾರಿ ವಿಮಾನ ನಿಲ್ದಾಣದ ಅಭಿವೃದ್ಧಿ ಜಮೀನನ್ನು ಅಭಿವೃದ್ಧಿದಾರರಿಗೆ ಹಸ್ತಾಂತರಿಸುವ ಕಾರ್ಯಪ್ರಗತಿಯಲ್ಲಿದೆ ಎಂದು ಸಚಿವ ಶ್ರೀ ಆರ್. ರೋಷನ್ ಬೇಗ್ ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್

## ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಪ್ರಶಸ್ತಿ ಪ್ರದಾನ

**ಬೆಂಗಳೂರು, ಫೆಬ್ರವರಿ 4 (ಕರ್ನಾಟಕ ವಾರ್ತೆ)**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2013–14 ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಅತ್ಯುತ್ತಮ ವಿಶ್ವವಿದ್ಯಾನಿಲಯ, ಕಾರ್ಯಕ್ರಮ ಸಂಯೋಜನಾಧಿಕಾರಿ, ಅತ್ಯುತ್ತಮ ವಿದ್ಯಾರ್ಥಿ ಸ್ವಯಂ ಸೇವಕ/ಸೇವಕಿಯರಿಗೆ ರಾಜ್ಯ ಪ್ರಶಸ್ತಿ ನೀಡುವ ಸಮಾರಂಭವನ್ನು ಫೆಬ್ರವರಿ 6 ರಂದು ಬೆಳಿಗ್ಗೆ 11–30 ಗಂಟೆಗೆ ರಾಜಭವನದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಏರ್ಪಡಿಸಿದೆ.

ರಾಜ್ಯಪಾಲರಾದ ಶ್ರೀ ವಜುಭಾಯಿ ವಾಲ ಪ್ರಶಸ್ತಿ ಪ್ರದಾನ ಮಾಡುವರು. ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಶ್ರೀ ಕೆ. ಅಭಯಚಂದ್ರ ಜೈನ್, ಪ್ರಶಸ್ತಿ ವಿಜೇತರ ಕೈಪಿಡಿ ಬಿಡುಗಡೆ ಮಾಡುವರು. ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎನ್. ನಾಗಾಂಬಿಕಾ ದೇವಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಕೆ.ಎಸ್. ರವೀಂದ್ರನಾಥ್, ಮುಖ್ಯ ಅತಿಥಿಗಳಾಗಿ ಭಾಗಹಿಸಲಿದ್ದಾರೆ ಎಂದು ಡಾ. ಗಣನಾಥ ಶೆಟ್ಟಿ, ರಾಜ್ಯ ಸಂಪರ್ಕಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಅವರು ತಿಳಿಸಿದ್ದಾರೆ.

ಪಹೊ:ಜಿಪಿಆರ್.

## ನೋಂದಣಿ ಸಂಖ್ಯೆ ವೆಬ್‌ಸೈಟ್‌ನಲ್ಲಿ ಪ್ರಕಟ

**ಬೆಂಗಳೂರು, ಫೆಬ್ರವರಿ 4 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗದ ದಿನಾಂಕ 25–09–2014ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ 14–12–2014 ರಂದು ನಡೆಸಲಾದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗ ಅಂತರ್ಜಾಲ “http://kpsc.kar.ni.in/Result” ನಲ್ಲಿ ಪ್ರಕಟಿಸಲಾಗಿದೆ, ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಪಹೊ:ಜಿಪಿಆರ್.

## ಮೀಟರ್ ಖರೀದಿ ಅವ್ಯವಹಾರ – ಪ್ರಧಾನ ಕಾರ್ಯದರ್ಶಿಯವರಿಂದ ತನಿಖೆ

**ಬೆಂಗಳೂರು, ಫೆಬ್ರವರಿ 4 (ಕರ್ನಾಟಕ ವಾರ್ತೆ)**

ವಿದ್ಯುತ್ ಮೀಟರ್ ಖರೀದಿಯ ಅವ್ಯವಹಾರದ ತನಿಖೆಯನ್ನು ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ವಹಿಸಿಕೊಡಲಾಗುವುದೆಂದು ವಿಧಾನ ಪರಿಷತ್ತಿನ ನಾಯಕ ಎಸ್.ಆರ್. ಪಾಟೀಲ್ ಅವರು ತಿಳಿಸಿದರು.

ವಿಧಾನ ಪರಿಷತ್ತಿನ ಆರಂಭದಲ್ಲಿ ವಿರೋಧ ಪಕ್ಷದ ನಾಯಕ ಕೆ.ಎಸ್. ಈಶ್ವರಪ್ಪ ಅವರು ನೆನ್ನೆ ಸದನದಲ್ಲಿ ಇಂಧನ ಸಚಿವರು ಎರಡು ಕಂಪನಿಗಳಿಗೆ ನೀಡಿರುವ ಗುತ್ತಿಗೆಯನ್ನು ಇಂದೇ ರದ್ದುಪಡಿಸುತ್ತೇವೆ ಹಾಗೂ ಇನ್ನೊಂದು ತಿಂಗಳಲ್ಲಿ ಟೆಂಡರ್ ಕರೆಯಲಾಗುವುದೆಂದು

ತಿಳಿಸಿರುವುದಕ್ಕೆ ನಮ್ಮ ಒಪ್ಪಿಗೆ ಇದೆ. ಆದರೆ ಅವ್ಯವಹಾರದಲ್ಲಿ ಬಾಗಿಯಾಗಿರುವವರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಭಾನಾಯಕರು ಈ ಅವ್ಯವಹಾರದ ತನಿಖೆಯನ್ನು ಸದನದ ಸಮಿತಿ ಅಥವಾ ಲೋಕಾಯುಕ್ತಕ್ಕೆ ವಹಿಸುವುದರಿಂದ ಎಲ್ಲಾ ರಾಜಕಾರಣಿಗಳು ಅಧಿಕಾರಿಗಳು ಭ್ರಷ್ಟರೆಂಬ ತಪ್ಪು ಸಂದೇಶ ಹೋಗುತ್ತದೆ. ಆದ್ದರಿಂದ ಈ ವಿಷಯವು ಹಣಕಾಸು ಇಲಾಖೆಗೆ ಸಂಬಂಧಪಡುವ ಹಿನ್ನೆಲೆಯಲ್ಲಿ ಪ್ರಧಾನ ಕಾರ್ಯದರ್ಶಿಯವರಿಂದ ತನಿಖೆಯನ್ನು ನಡೆಸುವ ಮೂಲಕ ತಪ್ಪತಸ್ಥರಿಗೆ ಶಿಕ್ಷೆ ವಿಧಿಸಲಾಗುವುದೆಂದರು.

2008ನೇ ಇಸವಿಯಿಂದ ಈ ವಿಚಾರದ ಬಗ್ಗೆ ತನಿಖೆಯಾಗಬೇಕಾಗಿರುವುದರಿಂದ ಹಾಗೂ ಮುಂದಿನ ತಿಂಗಳು ಬಜೆಟ್‌ಗೆ ತಯಾರಿ ನಡೆಸಬೇಕಾಗಿರುವುದರಿಂದ ತನಿಖೆಗೆ ಕನಿಷ್ಠ ಮೂರು ತಿಂಗಳ ಅವಧಿಯನ್ನು ನೀಡಬೇಕಾಗುತ್ತದೆ ಎಂದು ಸಭಾಪತಿಯವರಿಗೆ ಅವರು ತಿಳಿಸಿದರು.

ಬಿಜಿಪಿ:ಜಿಪಿಆರ್.

## ಜನವರಿ 3 ರೊಳಗೆ ಹಕ್ಕುಪತ್ರ ವಿತರಣೆ

**ಬೆಂಗಳೂರು, ಫೆಬ್ರವರಿ 4 (ಕರ್ನಾಟಕ ವಾರ್ತೆ)**

ಮುಂದಿನ ವರ್ಷದ ಜನವರಿ ಮೂರರೊಳಗೆ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಕಂದಾಯ ಸಚಿವ ವಿ. ಶ್ರೀನಿವಾಸಪ್ರಸಾದ್ ಅವರು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಹಕ್ಕುಪತ್ರಕ್ಕಾಗಿ ರಾಜ್ಯಾದ್ಯಂತ ಡಿಸೆಂಬರ್ 25 ರವರೆಗೆ 3 ಲಕ್ಷದ 48 ಸಾವಿರ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಆಯಾ ತಾಲ್ಲೂಕು ತಹಶೀಲ್ದಾರರು ಇದಕ್ಕೆ ಕಾರ್ಯನಿರ್ವಹಣಾಧಿಕಾರಿಯಾಗಿರುತ್ತಾರೆಂದರು.

94 ಸಿ ಯೋಜನೆಯ ಅನ್ವಯ ಗ್ರಾಮಾಂತರ ಪ್ರದೇಶದಿಂದ ಹಕ್ಕುಪತ್ರಕ್ಕೆ ಬೇಡಿಕೆ ಸಲ್ಲಿಸಿರುವ ಫಲಾನುಭವಿಯು 30 x 40 ಅಡಿ ನಿವೇಶನಕ್ಕೆ ಶೇಕಡ 10 ರಷ್ಟು, 60 x 40 ಕ್ಕೆ ಶೇಕಡ 20 ರಷ್ಟು ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರು, ಮಾಜಿ ಸೈನಿಕರು ಮತ್ತು ಪೌರ ಕಾರ್ಮಿಕರಿಗೆ 30 x 40 ಕ್ಕೆ ಶೇಕಡ 5 ರಷ್ಟು ಹಾಗೂ 60 x 40 ಕ್ಕೆ ಶೇಕಡ 10 ರಷ್ಟು ಮಾರ್ಗಸೂಚಿ ಬೆಲೆಯನ್ನು ಪಾವತಿಸಬೇಕಾಗುತ್ತದೆ ಎಂದು ಸಚಿವರು ತಿಳಿಸಿದರು.

ಬಿಜಿಪಿ:ಜಿಪಿಆರ್.

ಛಾಯಾಚಿತ್ರ ಶೀರ್ಷಿಕೆ:

ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಈ ಬಾರಿಯ ಚನ್ನಪಟ್ಟಣದ ಗೊಂಬೆಗಳ ಸ್ತಬ್ಧ ಚಿತ್ರಕ್ಕೆ ದೊರೆತ ತೃತೀಯ ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ವಾರ್ತಾ ಸಚಿವ ಶ್ರೀ ಆರ್. ರೋಷನ್‌ಬೇಗ್ ಅವರು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಗೆ ನೀಡಿ ಸಂತಸ ಹಂಚಿಕೊಂಡರು. ಚಿತ್ರದಲ್ಲಿ ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ನಾಗಾಂಬಿಕ ದೇವಿ, ಇಲಾಖೆ ನಿರ್ದೇಶಕ ಶ್ರೀ ಎನ್. ಆರ್. ವಿಶುಕುಮಾರ್ ಅವರನ್ನು ಕಾಣಬಹುದು.